## <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 723/2017 ಸಿಡಬ್ಲೂ: 2 ಪಿಡಬ್ಲೂ: 1

ಪ್ರಮಾಣವಚನ ಬೋಧಿಸಲಾಯಿತು ದಿಃ 11-09-2025

ಹೆಸರು : ರಮೇಶ್

ತಂದೆ ಹೆಸರು : ಶರಣಯ್ಯ

ವಯಸ್ಸು : 32 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ 1 ರವರು ನನಗೆ ಪರಿಚಯವಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತಿಲ್ಲ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ. ಪೋಲೀಸರು ನಮ್ಮ ಸಮಕ್ಷಮ ಯಾವುದೇ ರೀತಿಯ ಪಂಚನಾಮೆಗಳು ಮಾಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಜಪ್ತಿ ಪಂಚನಾಮೆ ಆಗಿದ್ದು, ಸಾಕ್ಷಿಯು ಸದರಿ ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಗಿದೆ ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆದರೇ ನಿಪಿ-1 ರಲ್ಲಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿಃ 24-07-2017 ರಂದು ನಾನು ಮತ್ತು ಚಾ ಸಾ 1 ರವರು ಸೇಡಂ ನಲ್ಲಿ ಎಚ್ ಪಿ ಪೆಟ್ರೋಲ್ ಪಂಪ್ ನಲ್ಲಿ ಇದ್ದಾಗ ಚಾ ಸಾ 7 ರವರು ನನಗೆ ಅಕ್ರಮವಾಗಿ ಇಟಕ್ಕಲ್ ಗ್ರಾಮದಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿತನು ಮನೆಯಲ್ಲಿ ಸೇಂದಿ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ ಪಂಚರಾಗಲು ಕೋರಿದ ಮೇರೆಗೆ ನಾನು ಒಪ್ಪಿ ಕೊಂಡಿದ್ದೆ ಎಂದರೆ ಸರಿಯಿಲ್ಲ. ನಾನು ಮತ್ತು ಎಲ್ಲಾ ಸಿಬ್ಬಂದಿಗಳು ಸರ್ಕಾರಿ ವಾಹನ ಸಂಖ್ಯೆ ಕೆ ಎ 32 ಬಿ 522 ಮುಖಾಂತರ ಬೆಳಿಗ್ಗೆ

10-00 ಕಛೇರಿಯಿಂದ ಹೊರಟು 11-00 ಗಂಟೆಗೆ ಬಾತನಿ ಬಂದ ಸ್ಥಳ ತಲುಪಿದಾಗ ಚಾಸಾ 7 ರವರು ಶೋಧನ ಪತ್ರವನ್ನು ತಯಾರಿಸಿ ದಾಳಿ ಮಾಡಿ ಒಬ್ಬ ವ್ಯಕ್ತಿ ದ್ವಿಚಕ್ರವಾಹನದ ಮುಂದೆ ಒಂದು ಪ್ಲಾಸ್ಟಿಕ್ ಚೀಲವನ್ನು ಇಟ್ಟಿಕೊಂಡು ಕಾನು ಕುರ್ತಿ ಗ್ರಾಮದಿಂದ ಇಟಕ್ಕಲ್ ಗ್ರಾಮದ ಕಡೆ ಹೋಗುತ್ತಿರುವಾಗ ಸಿಬ್ಬಂದಿಯವರು ಆತನಿಗೆ ಕೈಸನ್ನೆ ಮಾಡಿ ನಿಲ್ಲಿಸಿ ಕೇಳಲಾಗಿ ಅವರು ಸುಮ್ಮನೆ ನಿಂತಿದ್ದರು ಆಗ ಸದರಿ ವಾಹನವನ್ನು ಹಾಗೂ ಒಂದಕು ಪ್ಲಾಸ್ಟಿಕ್ ಚೀಲವನ್ನು ಪರಿಶೀಲನೆ ಮಾಡಲಾಗಿ ಅದರಲ್ಲಿ 5ಲೀ ಸಾಮರ್ಥ್ಯ ಉಳ್ಳ ನಾಲ್ಕು ಕವರ್ ಗಳುಕಂಡು ಬಂದವು ಎಂದರೆ ಸರಿಯಿಲ್ಲ. ಅದನ್ನು ಬಿಚ್ಚಿ ನೋಡಲಾಗಿ ಅದರಲಿ ಒಟ್ಟು 20 ಲೀ ಸೇಂದಿ ಕಂಡು ಬಂದಿದ್ದು ಅದರಲ್ಲಿ 1 ಲೀ ಸೇಂದಿಯನ್ನು ಪ್ರತ್ಯೇಕವಾಗಿ ತೆಗೆದುಕೊಂಡು 444 ಎಂದು ನನ್ನ ಸಮಕ್ಷಮದಲ್ಲಿ ಒಂದು ಬಾಗಿಲಿನಲ್ಲಿ ಜಪ್ತಿ ಮಾಡಲಾಯಿತು ಎಂದರೆ ಸರಿಯಿಲ್ಲ. ಸದರಿ ಆರೋಪಿತನ ಬೈಕ್ ನಂ. ಕೆ ಎ 32 ಎಸ್ 6309 ಅಂತಾ ಕಂಡು ಬಂದಿದ್ದು ಎಂದರೆ ಸರಿಯಿಲ್ಲ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 11-00 ಗಂಟೆಯಿಂದ 12-10 ವರೆಗೆ ಬರೆದು ಮುಗಿಸಲಾಗಿದೆ ಎಂದರೆ ಸರಿಯಿಲ್ಲ. ಪಂಚನಾಮೆಯಲ್ಲಿ ಭಾಗಿಯಾಗಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಗೆ ಒಂದು ಬಾಟಲಿಯನ್ನು ತೋರಿಲಾಗಿ ಸಾಕ್ಷಿಯು ಅದನ್ನು ಗುರುತಿಸಲು ನಿರಾಕರಿಸಿರುತ್ತಾರೆ ಆದ್ದರಿಂದ ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**